**ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಅಧೀಕ್ಷಕರುದರ್ಜೆ-1ರ ವೃಂದದಲ್ಲಿನ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಪ್ರಸ್ತಾವಿಸಲಾಗಿರುವ ಸಾಮಾನ್ಯ ಮತ್ತು ಏಕಪಠ್ಯಕ್ರಮ**

**ಘಟಕ- I**

ಸಮಾಜಕಾರ್ಯದ ಪರಿಕಲ್ಪನೆಗಳು, ಸಮಾಜಕಾರ್ಯ, ಸಮಾಜ ಸೇವೆ, ಸಾಮಾಜಿಕ ನೀತಿ, ಸಾಮಾಜಿಕ 'ಅಭಿವೃದ್ಧಿ, ವೃತ್ತಿಪರ ಮತ್ತು ಸ್ವಯಂಪ್ರೇರಿತ ಸಮಾಜಕಾರ್ಯ, ಸಾಮಾಜಿಕ ಪರಿಕಲ್ಪನೆ ಮತ್ತು ತತ್ವಶಾಸ್ತ್ರ, ಸಮಾಜಕಾರ್ಯ ಮತ್ತು ಸಮಾಜಶಾಸ್ತ್ರದಲ್ಲಿ ನೈತಿಕ ಹೊಣೆಗಾರಿಕೆ, ಸಾಮಾಜಿಕ ಬದಲಾವಣೆಯ ಕಾರ್ಯಗಳು, ಸಾಮಾಜಿಕ ಪ್ರಕ್ರಿಯೆ ಮತ್ತು ಅರ್ಥ.

**ಘಟಕ-II**

ಎ. ಸಮುದಾಯದ ಪ್ರಕಾರಗಳು-ಗ್ರಾಮೀಣ, ನಗರ ಮತ್ತು ಆದಿವಾಸಿ ಸಮುದಾಯಗಳು, ಸಮಾಜಕಾರ್ಯ ವೃತ್ತಿಯಸಾಮಾಜಿಕ ಮತ್ತುಸಾಂದರ್ಭಿಕಅರ್ಥೈಸುವಿಕೆ, ಸಮುದಾಯ ಸಂಘಟನೆ ಮತ್ತು ಸಮಾಜಕಾರ್ಯ ವೃತಿಯಲ್ಲಿ ಕೌಶಲ್ಯಗಳು, ಸಮುದಾಯದ ಒಳಗೆ ಮತ್ತು ಹೊರಗೆ ಸಂಪನ್ಮೂಲಗಳ ಸದ್ಬಳಕೆ, ನಗರ, ಗ್ರಾಮೀಣ, ಆದಿವಾಸಿ ಸಮುದಾಯ ಮತ್ತು ಸಮಾಜದ ಅಂಚಿನಲ್ಲಿರುವ ವರ್ಗಗಳು.

ಬಿ. ಪ್ರಮುಖಸಾಮಾಜಿಕ ಸಮಸ್ಯೆಗಳು-ಮಹಿಳಾ ಸಂಬಂದಿತ ನಿರುದ್ಯೋಗ, ಅನಕ್ಷರತೆ, ಬಡತನ, ಕಾನೂನಿನೊಡನೆ ಸಂಘರ್ಷಕ್ಕೆ ಒಳಗಾದ ಮಕ್ಕಳು, ಮಹಿಳಾ ಮತ್ತು ಮಕ್ಕಳಸಂಬಂಧಿತಅಪರಾಧ, ಮಾನವಅನೈತಿಕ ಸಾಗಾಣಿಕೆ ಮತ್ತು ಭ್ರಷ್ಟಾಚಾರ, ಮಹಿಳೆಯರಸಮಾಜೋ-ಆರ್ಥಿಕ ಸಬಲೀಕರಣ, ಮಹಿಳಾಅಧ್ಯಯನ, ಸೈಬರ್ಅಪರಾಧ, ದೇವದಾಸಿ ಪದ್ದತಿ, ಮದ್ಯಪಾನ ಮತ್ತು ಮಾದಕ ವಸ್ತುಗಳ ದುರ್ಬಳಕೆಯನ್ನು ತಡೆಗಟ್ಟುವುದು.

**ಘಟಕ-III**

ಎ. ವ್ಯಕ್ತಿಗತಕಾರ್ಯ ವಿಧಾನ:ಸಮಾಜಕಾರ್ಯ ವೃತ್ತಿಯಒಂದು ವಿಧಾನವಾಗಿ, ವ್ಯಕ್ತಿಗಳು ಮತ್ತು ಸಮೂಹಗಳೊಂದಿಗೆ ಕಾರ್ಯನಿರ್ವಹಿಸುವುದರ ಸಮಗ್ರ ಧ್ಯೇಯ ಮತ್ತು ಉದ್ದೇಶಗಳು, ಪರಿಹಾರಾತ್ಮಕ, ಪ್ರತಿಬಂಧಕ, ಸಂವರ್ಧಕ, ಅಭಿವೃದ್ಧಿಪರ ಮತ್ತು ದೇಸೀ ವ್ಯಕ್ತಿಗತ ಕಾರ್ಯವಿಧಾನ 'ವ್ಯಕ್ತಿಗತಕಾರ್ಯವಿಧಾನದಲ್ಲಿ ಸಾಂಸ್ಕೃತಿಕತೆ ಮತ್ತು

ಸಂವೇದನಾತ್ಮಕತೆ, ಸಮಾಜ ಕಾರ್ಯವೃತ್ತಿಯಲ್ಲಿ ನಿರ್ದಿಷ್ಟತಂತ್ರಗಳು, ಒಗ್ಗೂಡುವಿಕೆ ಪರಿಕಲ್ಪನೆಗಳು, ಸಮುದಾಯ ಅಭಿವೃದ್ಧಿ ದೃಷ್ಟಿಕೋನ.

ಬಿ. ಸಮೂಹಕಾರ್ಯ ಪ್ರಕ್ರಿಯೆ, ಸಮೂಹರಚನೆ, ಸಮೂಹ ಕಾರ್ಯಪ್ರಕ್ರಿಯೆಯನ್ನು ಅನುಷ್ಠಾನಗೊಳಿಸುವುದರಲ್ಲಿ ಧ್ಯೇಯೋದ್ದೇಶಗಳನ್ನು ಮತ್ತು ಕಾರ್ಯಕ್ರಮ ಯೋಜನೆಯನ್ನು ರೂಪಿಸುವುದು, ಸಮೂಹಕಾರ್ಯದಲ್ಲಿನ ಸಂವಹನ ಮತ್ತು ಸಮೂಹ ಪರಿಣಾಮ ಕಾರಿತ್ವದ ಮಾಪನಗಳು– ಸಮೂಹಕಾರ್ಯನಿರ್ವಹಣೆಯ ನಿಯಮಗಳು, ವ್ಯಕ್ತಿತ್ವವಿಕಾಸ– ಸಮೂಹ ಬೆಳವಣಿಗೆಯು ಹಂತಗಳು ಮತ್ತು ಸಮುದಾಯ ಅಭಿವೃದ್ಧಿ ದೃಷ್ಟಿಕೋನ.

**ಘಟಕ– IV**

ಎ. ವಿಶೇಷ ವರ್ಗಗಳ ಮಕ್ಕಳು– ವಂಚಿತ ಮಕ್ಕಳು ಮತ್ತು ಕಾನೂನಿನೊಡನೆ ಸಂಘರ್ಷಕ್ಕೆ ಒಳಗಾದ 'ಮಕ್ಕಳು, ನಿರ್ಗತಿಕ ಮಕ್ಕಳು, ವಿಭಿನ್ನ ಸಾಮರ್ಥ್ಯದ ಮಕ್ಕಳು, ವಿಶೇಷವಾಗಿ ಶೋಷಿತ ಮತ್ತುದಮನಿತಮಕ್ಕಳು, ಬೀದಿ ಮಕ್ಕಳು, ಬಾಲ ಕಾರ್ಮಿಕರು, ವೇಶ್ಯಾವಾಟಿಕೆಯಲ್ಲಿನ ಮಕ್ಕಳು, ಜೀತಪದ್ಧತಿಯಲ್ಲಿನ ಮಕ್ಕಳು, ಭಿಕ್ಷುಕ ಮಕ್ಕಳು, ಶಾಲೆತೊರೆದ ಮಕ್ಕಳು, ಭಗ್ನಕುಟುಂಬಗಳಲ್ಲಿನ ಮಕ್ಕಳು, ದುರ್ಬಳಕೆಗೆಒಳಗಾದ ಮಕ್ಕಳು, ಬಾಲನ್ಯಾಯಕಾಯ್ದೆಯ ಪ್ರಕಾರ ಮಕ್ಕಳಲ್ಲಿನ ವರ್ತನಾ ಸಮಸ್ಯೆಗಳು.

ಬಿ. ಕೌಟುಂಬಿಕ ಜೀವನ ಶಿಕ್ಷಣದ ಪರಿಕಲ್ಪನೆ, ಅಗತ್ಯ, ತತ್ವಗಳು, ತಂತ್ರಗಳು, ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು, ಕೌಟುಂಬಿಕ ಜೀವನ ಶಿಕ್ಷಣದಲ್ಲಿ ಅಂತರ್–ಶಿಸ್ತೀಯ ದೃಷ್ಟಿಕೋನ, ಕೌಟುಂಬಿಕ ತತ್ವಗಳಲ್ಲಿ ಸಮಾಜ ಕಾರ್ಯದ ಮಧ್ಯಪ್ರವೇಶಕ ಕ್ರಮ, ದೃಷ್ಟಿಕೋನ,ತಂತ್ರಗಳು, ವಿವಾಹಪೂರ್ವ ಆಪ್ತಸಮಾಲೋಚನೆ ಮತ್ತು ಕೌಟುಂಬಿಕ ಚಿಕಿತ್ಸೆ.

ಸಿ. ರಾಷ್ಟ್ರೀಯ ಆರೋಗ್ಯ ನೀತಿಗಳು, ಮಾನಸಿಕ ಆರೋಗ್ಯ ಅಧಿನಿಯಮ, 1987, ವಿಭಿನ್ನ ಸಾಮರ್ಥ್ಯದ ವ್ಯಕ್ತಿಗಳಿಗೆ ಸಮಾನ ಅವಕಾಶಗಳ ಅಧಿನಿಯಮ, 1995, ಪ್ರಸವಪೂರ್ವ ಭ್ರೂಣಲಿಂಗಪತ್ತೆ ತಂತ್ರವಿಧಾನಗಳ ಅಧಿನಿಯಮ,1998. ಮಹಿಳೆಯರು ಮತ್ತು ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು, ಮಹಿಳೆಯರ ವಿರುದ್ಧದ ಅಪರಾಧ, ಅಪರಾಧಶಾಸ್ತ್ರ ಮತ್ತು ಸುಧಾರಣಾ

ಆಡಳಿತ, ಪುನರ್ವಸತಿ ಮತ್ತು ಅನುಪಾಲನಾ ಸೇವೆಗಳು.

ಡಿ. ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಅಧಿನಿಯಮಗಳು ಮತ್ತು ನಿಯಮಗಳು.

**ಘಟಕ– Vಪೌಷ್ಟಿಕತೆ:**

ಶಕ್ತಿಯ ವರ್ಗೀಕರಣ, ಕಾರ್ಯಗಳು ಮತ್ತು ಮೂಲಗಳು, ಶರ್ಕರಪಿಷ್ಟಗಳು, ಮೇದಸ್ಸುಗಳು, ಪ್ರೊಟೀನುಗಳು, ಮೇದಸ್ಸು ಮತ್ತು ನೀರಿನಲ್ಲಿ ಕರಗುವ ವಿಟಮಿನ್‌ಗಳು, ಖನಿಜಗಳು, ನೀರು ಮತ್ತು ಸಮತೋಲನ ಆಹಾರ.

**ಘಟಕ– VIಅಪೌಷ್ಟಿಕತೆ:**

ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ, ಕಾರಣ ವಿಜ್ಞಾನ ಮತ್ತು ತಡೆಗಟ್ಟುವಿಕೆ ಹಾಗೂ ಸರಿಪಡಿಸುವಿಕೆ ತಂತ್ರಗಳು, ಅತ್ಯಂತ ಹೆಚ್ಚಿನ ಅಪಾಯ ಸಾಧ್ಯತೆಯುಳ್ಳ ರೋಗಿಗಳನ್ನು ಗುರುತಿಸುವುದು, ಎ, ಬಿ, ಸಿ, ಡಿ, ಇ, ಎಂ, ವಿಟಮಿನ್‌ಗಳು, ಕಬ್ಬಿಣ, ಕ್ಯಾಲ್ಸಿಯಂ ಮತ್ತು ಅಯೋಡಿನ್‌ಗಳನ್ನು ನೀಡುವ ಮೂಲಕ ರೋಗನಿರೋಧಕ ಸಾಮರ್ಥ್ಯ ವರ್ಧನೆ.

**ಘಟಕ– VII**

ತಾಯಿ ಮತ್ತು ಮಗುವಿನ ಅಪೌಷ್ಟಿಕತೆ, ಬೆಳವಣಿಗೆಯ ಮೇಲೆಆಗುವ ಪರಿಣಾಮ, ಗರ್ಭದಾರಣೆಯ ಫಲಿತಾಂಶ, ಸಂತಾನೋತ್ಪತ್ತಿ ಆರೋಗ್ಯ, ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ.

**ಘಟಕ–VIII**

ಎ. ಪೌಷ್ಟಿಕತೆ–ಜೀವನಚಕ್ರ ಹಂತಗಳು, ಗರ್ಭಾವಸ್ಥೆಯಿಂದ ಮರಣಾವಸ್ಥೆಯವರೆಗಿನ ವಿಕಾಸದ ಮೈಲುಗಲ್ಲುಗಳು ಮತ್ತು ಮಾನದಂಡಗಳು.

ಬಿ. ಶೈಶವಾವಸ್ಥೆ– ಬೆಳವಣಿಗೆ ಮತ್ತು ವಿಕಾಸ, ಸ್ತನ್ಯಪಾನ, ಮೇಲಾಹಾರ, ಪೂರಕ ಆಹಾರ, ಕುಡಿಯಲು ಯೋಗ್ಯವಾದ ನೀರನ್ನು ಒದಗಿಸುವಿಕೆ, ರೋಗನಿರೋಧಕ ಚುಚ್ಚುಮದ್ದು ನೀಡುವಿಕೆ.

ಸಿ.ಶಾಲಾಪೂರ್ವ ವರ್ಷಗಳು– ಬೆಳವಣಿಗೆ ಮತ್ತು ವಿಕಾಸ, ಶಾಲಾಪೂರ್ವ ವಯಸ್ಸಿನಲ್ಲಿ ಅಪೌಷ್ಟಿಕತೆಗೆ ಕಾರಣಗಳು, ಬಾಲ್ಯಾವಸ್ಥೆಯ ಸಾಮಾನ್ಯ ಕಾಯಿಲೆಗಳು, ಪರಿಸರ

ಸಂಬಂಧಿತ ಸಮಸ್ಯೆಗಳಿಂದ ಹೊರಬರುವ ಕ್ರಮಗಳು.

ಡಿ. ಶಾಲಾ ವರ್ಷಗಳು– ಮಧ್ಯಾಹ್ನದ 'ಬಿಸಿಊಟ, ಆವರ್ತನೀಯ ಆಹಾರಪಟ್ಟಿ.

ಇ. ಹದಿಹರೆಯಾವಸ್ಥೆ– ಬೆಳವಣಿಗೆ ಮತ್ತು ವಿಕಾಸ, ಭೌತಿಕ, ಶಾರೀರಿಕ ಮತ್ತು ಸಾಮಾಜಿಕ ಬದಲಾವಣೆಗಳು, ಋತುಚಕ್ರ– ಆರೈಕೆ ಮತ್ತು ನೈರ್ಮಲ್ಯ, ಹದಿಹರೆಯದ ಹೆಣ್ಣುಮಕ್ಕಳಲ್ಲಿ ಕಂಡುಬರುವ ದೀರ್ಘಕಾಲಿಕ ಶಕ್ತಿಗೆ ಸಂಬಂಧಿಸಿದ ನ್ಯೂನತೆಗಳು, ಆಪ್ತ ಸಮಾಲೋಚನೆ, ಕೌಶಲ್ಯಾಭಿವೃದ್ಧಿ.

**ಎಫ್**. ಪ್ರೌಢಾವಸ್ಥೆ– ತೂಕನಿರ್ವಹಣೆ, ಅತಿಪೌಷ್ಟಿಕತೆ ಮತ್ತು ಅಪೌಷ್ಟಿಕತೆ, ದೀರ್ಘಕಾಲಿಕ ಅಂಗವೈಕಲ್ಯ ಕಾಯಿಲೆಗಳನ್ನು ತಡೆಗಟ್ಟುವುದರಲ್ಲಿ ಆಹಾರ ಸಂಬಂಧಿತ ಅಂಶಗಳು.

**ಜಿ.**ವೃದ್ಧಾಪ್ಯ ಆರೋಗ್ಯ ಪಾಲನೆ – ಶಾರೀರಿಕ, ಮಾನಸಿಕ ಮತ್ತು ಸಾಮಾಜಿಕ ಬದಲಾವಣೆಗಳು, ಗುಣಾತ್ಮಕ ಜೀವನದ ಮೇಲ 'ಬೀರುವಪ್ರಭಾವ, ಸಾಂಸ್ಥಿಕ ಪಾಲನೆ, ವಿವಿಧ ಹಂತಗಳಲ್ಲಿ ಜೀವನ 'ಕೌಶಲ್ಯಗಳ ವಿಕಾಸ ಮತ್ತು ನಿರ್ವಹಣೆ

**ಘಟಕ– IX**

ಎ. ಆಪ್ತ ಸಮಾಲೋಚನೆ– ವ್ಯಾಖ್ಯೆ, ಮಹತ್ವ, ಮೂಲಾಂಶಗಳು, ಗುಣಲಕ್ಷಣಗಳು, ಗುರಿಗಳು, ಆಪ್ತ ಸಮಾಲೋಚನೆಯಲ್ಲಿ ಸಂಬಂಧದ ಸ್ವರೂಪ, ವಿವಿಧ ಸಂಸ್ಥೆಗಳಲ್ಲಿ ಆಪ್ತ ಸಮಾಲೋಚನೆ–ಕುಟುಂಬ, ಶಾಲೆ, ಪೋಷಕಾಂಶಗಳ ಪರಿಹಾರ ಮತ್ತು ಪುನರ್ವಸತಿ, ಮಾಹಿತಿ ಶಿಕ್ಷಣ ಮತ್ತು ಸಂವಹನ–ದೃಷ್ಟಿಕೋನ, ಪೌಷ್ಟಿಕತೆಯ ಮಧ್ಯಪ್ರವೇಶಕ ಕಾರ್ಯಕ್ರಮಗಳು, ವ್ಯಸನ ಬಿಡಿಸುವ ಕೇಂದ್ರಗಳು, ಸುಧಾರಣಾ ಸಂಸ್ಥೆಗಳು, ಎಚ್ಐವಿ/ಏಡ್ಸ್ಆಪ್ತ ಸಮಾಲೋಚನೆ, ವೈವಾಹಿಕ ಆಪ್ತ ಸಮಾಲೋಚನೆ, ಅವಿವಾಹಿತ ತಾಯಂದಿರ ಕ್ಷೇಮಾಭಿವೃದ್ಧಿ.

ಬಿ. ಕೌಟುಂಬಿಕ ಪಾಲನೆ, ಸಾಂಸ್ಥಿಕ ಪಾಲನೆ, ಅಸಾಂಸ್ಥಿಕ ಪಾಲನೆ –ತತ್ವ ಮತ್ತು ರೂಢಿ, ಮಾನವ ಸಂಪನ್ಮೂಲ ಅಭಿವೃದ್ಧಿ ನಿರ್ವಹಣೆ, ಸಂವಹನ, ಯೋಜನೆಯನ್ನು ರೂಪಿಸುವಿಕೆ, ನಿರ್ವಹಣೆ ಮತ್ತು ಮೌಲ್ಯಮಾಪನ.

**ಘಟಕ–X** ಕುಟುಂಬ ಜೀವನಚಕ್ರ– ವಿವಾಹ, ವೈವಾಹಿಕಹೊಂದಾಣಿಕೆಮತ್ತು ಸಮಸ್ಯೆಗಳು, ಕೌಟುಂಬಿಕ

ವಿಘಟನೆ, ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ, ಕಾನೂನುಗಳು ಮತ್ತು ರಕ್ಷಣೆ, ವಿಚ್ಛೇದನ ಮತ್ತು ಮರು ವಿವಾಹ, ಮಹಿಳಾ ಸಬಲೀಕರಣ, ಸಾಮಾಜಿಕ ನೆರವಿನ ವ್ಯವಸ್ಥೆ.

**ಘಟಕ–XI** ಬಾಲ್ಯ ಪೂರ್ವ ಹಂತದಲ್ಲಿನ ಆರೈಕೆ ಮತ್ತು ಶಿಕ್ಷಣ– ಇದರ ಮಹತ್ವ, ಅಗತ್ಯ ಮತ್ತು ವ್ಯಾಪ್ತಿ, ಶಿಶು ಮರಣ ಪ್ರಮಾಣದ ಪರಿಕಲ್ಪನೆ, ಶಾಲಾಪೂರ್ವ ಹಂತದ ವಿಧಗಳು, ಬಾಲ್ಯ ಪೂರ್ವ ಹಂತದಲ್ಲಿನ ವೈಕಲ್ಯಗಳನ್ನು ಗುರುತಿಸುವುದು ಮತ್ತು ಮಧ್ಯಪ್ರವೇಶಕ ಕ್ರಮಗಳನ್ನು ಕೈಗೊಳ್ಳುವುದು, ಶಾಲಾ ಪೂರ್ವಕೇಂದ್ರಗಳ ಸ್ಥಾಪನೆ– ಆಡಳಿತ ವ್ಯವಸ್ಥೆ, ಕಟ್ಟಡ ನಿರ್ಮಾಣ ಮತ್ತು ಸಾಧನ ಸಾಮಗ್ರಿ, ಸಿಬ್ಬಂದಿ ದಾಖಲೆಗಳು ಮತ್ತು ವರದಿಗಳು, ಕಾರ್ಯಕ್ರಮ ಯೋಜಿಸುವುದು,ಆಟಗಳು ಮತ್ತುಅವುಗಳ ಪ್ರಾಮುಖ್ಯತೆ.

**ಘಟಕ–XII** ನಗರ ಮತ್ತುಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ಹಂತಗಳ ಸಿಬ್ಬಂದಿಗಳಿಗೆ ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದ ವಿನೂತನ ಕಾರ್ಯಕ್ರಮಗಳು, ದೃಶ್ಯ–ಶ್ರವ್ಯ ಸಾಧನಗಳ ಅಭಿವೃದ್ಧಿ.

**ಘಟಕ–XIII** ಮಕ್ಕಳ ಕ್ಷೇಮಾಭಿವೃದ್ಧಿ ಮತ್ತು ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳು, ಭಾರತದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಪಟ್ಟ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು, ಕೇಂದ್ರೀಯ ಸಮಾಜಕಲ್ಯಾಣ ಮಂಡಳಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಎಫ್.ಪಿ.ಎ.ಎಲ್., ಆರೋಗ್ಯಕ್ಕಾಗಿ ಸ್ವಚ್ಛತೆ ಮತ್ತು ನೈರ್ಮಲ್ಯ.

**ಘಟಕ–XIV**ಮಕ್ಕಳು ಮತ್ತು ಮಾನವ ಹಕ್ಕುಗಳು, ಮಹಿಳಾ ಹಕ್ಕುಗಳು, ಭಾರತದಲ್ಲಿ ಮಹಿಳೆಯರ ಸ್ಥಿತಿ, ಮಹಿಳೆಯರ ದ್ವಿಪಾತ್ರ, ಮಹಿಳೆಯರ ಉದ್ಯೋಗ ಪ್ರವೃತ್ತಿಗಳು.

ಷರಾ:– ನಿರ್ದೇಶಕರು, ಭಾಷಾಂತರ ಇಲಾಖೆ ಇವರಿಂದ ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದಿಸಲ್ಪಟ್ಟ ಅನುವಾದಿತ ಯಥಾವತ್ತು ಪ್ರತಿ.

ಸಹಾಯಕ ನಿರ್ದೇಶಕರು (ಆಡಳಿತ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು